ಆಶ್ರಯ ಎಂದು ಪ್ರಿಂಟ್ ಮಾಡಿದ್ದಾರೆ, ಅದಕ್ಕಾಗಿ ಪ್ರಶ್ನೆಗೆ ಸರಿಯಾದಂಥ ಉತ್ತರ ಬಂದಿಲ್ಲ, ನನ್ನ ಉದ್ದೇಶ ಪ್ರಶ್ನೆ ಕೇಳಿರುವಂಥದ್ದು ರಾಜ್ಯ ಮತ್ತು ಲೋಕೋಪಯೋಗಿ ಹೆದ್ದಾರಿಗಳಲ್ಲಿ ಅತಿಕ್ರಮ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ ಈ ರಾಜ್ಯದಲ್ಲಿ, ಆ ಅತಿಕ್ರಮ ಕಟ್ಟಡಗಳನ್ನು ತೆರುವು ಮಾಡಿಸುವುದಕ್ಕೆ ಸರ್ಕಾರ ಯಾವರೀತಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ನಾನು ಪ್ರಶ್ನೆಯನ್ನು ಕೇಳಿರುತ್ತೇನೆ. ಪ್ರಿಂಟ್ ಮಾಡುವವರೋ ಅಥವಾ ಅಧಿಕಾರಿಗಳ ಮಿಸ್ಟೇಕ್‌ದಿಂದಲೊ ಆಶ್ರಯ ಎಂದು ಮಾಡಿಬಿಟ್ಟಿದ್ದಾರೆ. ನನ್ನ ಮೂಲ ಪ್ರಶ್ನೆ ಇದಾಗಿದೆ. ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಪಿಡಬ್ಲ್ಯೂಟಿ ರಸ್ತೆಗಳಲ್ಲಿ ಅತಿಕ್ರಮ ಕಟ್ಟಡಗಳು ಹೇರಳವಾಗಿ ಇವತ್ತು ನಿಂತುಬಿಟ್ಟಿವೆ. ಮುಖ್ಯವಾಗಿ ನಗರ ಪ್ರದೇಶಗಳಲ್ಲಿ, ತಾಲ್ಲೂಕು ಪ್ರದೇಶಗಳಲ್ಲಿ ಹೇರಳವಾಗಿ ನಿಂತುಬಿಟ್ಟಿವೆ. ಅವುಗಳನ್ನು ತೆರವು ಮಾಡಿಸದೆ ಹೋದರೆ ಇವತ್ತು ನೀವು ರಸ್ತೆಗಳನ್ನು ಏನು ಅಭಿವೃದ್ಧಿ ಮಾಡಿಸಬೇಕೆಂದು ಹೇಳುತ್ತಿದ್ದೀರಿ, ಅದನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ರಸ್ತೆ ಅಗಲವಾಗುವುದಿಲ್ಲ. ಸಂಚಾರಕ್ಕೆ ತೊಂದರೆಯಾಗುತ್ತದೆ ಸಂಪೂರ್ಣವಾಗಿ ಆ ಯೋಜನೆ ನಿಷ್ಫೀಯವಾಗುತ್ತದೆ, ಆ ಉದ್ದೇಶಕ್ಕಾಗಿ ನಾನು ಪ್ರಶ್ನೆ ಕೇಳಿರುವುದು, ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಪರಿಶೀಲನೆ ಮಾಡಿ ರಾಜ್ಯ ಹೆದ್ದಾರಿಯಲ್ಲಿ ಎಲ್ಲಿ ಅತಿಕ್ರಮಣವಾಗಿದೆ ಅದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

ಜಾಲ್ಸೂರು–ಸುಬ್ರಹ್ಮಣ್ಯ ರಸ್ತೆಯಲ್ಲಿ ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವುದು

38 (157): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಾಲ್ಸೂರು–ಸುಬ್ರಮಣ್ಯ ರಸ್ತೆಯಲ್ಲಿ ಸೋಣಂಗೇರಿ ಮತ್ತು ಕ್ಯೊಕುಳಿ ಎಂಬಲ್ಲಿ ಮುಳುಗು ಸೇತುವೆಗಳು ಇದ್ದು ಮಳೆಗಾಲದಲ್ಲಿ ಮಳೆ ನೀರು ಸೇತುವೆ ಮೇಲೆ ಹರಿಯುವುದರಿಂದ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮುಳುಗು ಸೇತುವೆಯನ್ನು ಸರ್ವ ಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾರಿ ಮಳೆ ಆಗಿದ್ದಲ್ಲಿ ಕೆಲವಷ್ಟು ಸಮಯ ಸೇತುವೆ ಮುಳುಗಡೆ ಆಗಿರುವುದು ಹಾಗೂ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಗೆಮನಕ್ಕೆ ಬಂದಿರುತ್ತದೆ.

ಆ) ಪ್ರಸ್ತಾಪಿತ ಸೇತುವೆಗಳನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ಯಾವುದಾದರೂ ಯೋಜನೆಯಡಿಯಲ್ಲಿ ಸರ್ವಋತು ಸೇತುವೆಯನ್ನು ನಿರ್ಮಾಣ ಮಾಡಲು ಪರಿಶೀಲಿಸಲಾಗುವುದು.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ನಾನು ಎರಡು ಭಾರಿ ಅಧಿವೇಶನದಲ್ಲಿ ಶಾಸಕನಾಗಿ ಆಯ್ಕೆಯಾಗಿ ಬಂದ ನಂತರವೂ ಇದೇ ಪ್ರಶ್ನೆಯನ್ನು ಕೇಳಿದ್ದೆ. ಈ ಬಾರಿಯೂ ಇದೇ

ಪ್ರಶ್ನೆಯನ್ನು ಕೇಳುತ್ತಿದ್ದೇನೆ. 3 ಬಾರಿಯೂ ನಾನು ಸದಸ್ಯನಾಗಿರುವಂತಹ ಸಂದರ್ಭದಲ್ಲಿಯೂ ಉತ್ತರವನ್ನು ಒಂದೇ ರೀತಿಯಲ್ಲಿ ಕೊಟ್ಟಿದ್ದಾರೆ. ಜಾಲ್ಸೂರು–ಸುಬ್ರಹ್ಮಣ್ಯ ರಸ್ತೆಯಲ್ಲಿ ಸೋಣಂಗೇರಿ ಮತ್ತು ಕ್ಯೊಕುಳಿ ಎಂಬಲ್ಲಿ ಮುಳುಗು ಸೇತುವೆ ಇದೆ, ಇದು ಭಾರಿ ಮಳೆ ಬಂದಾಗ ನೀರು ಬಂದಾಗ ಸೇತುವೆಯೂ ಮುಳುಗಡೆಯಾಗುತ್ತದೆ. ಇದರಿಂದಾಗಿ ಸಂಚಾರಕ್ಕೆ ತೊಂದರೆಯುಂಟಾಗುತ್ತದೆ. ಈ ಒಂದು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡಲಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಿದಾಗ ಅನುದಾನದ ಲಭ್ಯತೆಯನ್ನು ನೋಡಿಕೊಂಡು ಸದರಿ ಸೇತುವೆಯನ್ನು ಪರಿಶೀಲಿಸಲಾಗುತ್ತದೆಂಬ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು. ಕಳೆದ ಮೂರು ಭಾರಿ ಚುನಾಯಿತ ಪ್ರತಿನಿಧಿಯಾಗಿ ಆಯ್ಕೆಯಾದಂತಹ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಪರಿಶೀಲಿಸಲಾಗುವುದು ಮತ್ತು ಅನುದಾನದ ಲಭ್ಯತೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು, ಇದು ಜಾಲ್ಸೂರು–ಸುಬ್ರಹ್ಮಣ್ಯ ರಸ್ತೆಯಲ್ಲಿದೆ, ಅದು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗುವಂತಹ ಪ್ರಮುಖ ರಸ್ತೆಯಾಗಿದೆ. ಈ ರಸ್ತೆಯಲ್ಲಿ ಮಳೆ ಜಾಸ್ತಿ ಬಂದು ನೆರೆನೀರು ಬಂದು ವಾಹನ ಸಂಚಾರಕ್ಕೆ ತೊಂದರೆಯಾಗುವಂತಹ ಸಂದರ್ಭದಲ್ಲಿ ತುಂಬಾ ಗೊಂದಲ ಮತ್ತು ಗಲಾಟೆಗಳೂ ಕೂಡ ಆದಂತಹ ಸಂದರ್ಭಗಳು ಇವೆ. ಅದಕ್ಕಾಗಿ ಆದಷ್ಟು ಬೇಗನೆ ಈ ಎರಡು ಸೇತುವೆಯನ್ನು ಕ್ಯೊಕುಳಿ ಮತ್ತು ಸೋಣಂಗೇರಿ ಸೇತುವೆಯನ್ನು ಆದಷ್ಟು ಬೇಗನೆ ಸರ್ವಋತು ಸೇತುವೆಯನ್ನಾಗಿ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ 2003–04 ಸಾಲಿನಲ್ಲಿ ಭಾರತ ಹಣಕಾಸಿನ 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಈ ರಾಜ್ಯಕ್ಕೆ 287.69 ಕೋಟಿ ರೂಪಾಯಿಗಳನ್ನು ಈ ರಾಜ್ಯದಲ್ಲಿರತಕ್ಕಂತಹ ರಸ್ತೆಗಳ ನಿರ್ವಹಣೆಗೆ ಬಂದಂತಹ ಹಣ, ಒಂದು ಕಡೆ ಹಣಕಾಸಿನ ಪರಿಸ್ಥಿತಿಯು ಸರಿಯಿಲ್ಲವೆಂದು ಹೇಳುತ್ತಾರೆ. ಆ ಹಣವನ್ನು 287.69 ಕೋಟಿ ರೂಪಾಯಿಗಳನ್ನು ಹಣಕಾಸಿನ ಇಲಾಖೆಯವರು ಯಾವ ಮಂತ್ರಿಗಳ ಗಮನಕ್ಕೆ ಬಂದಿಲ್ಲ, ಹಣಕಾಸಿನ ಮಂತ್ರಿಗಳ ಗಮನಕ್ಕೂ ಕೂಡ ಬಂದಿಲ್ಲ. ಮುಖ್ಯಮಂತ್ರಿಗಳ ಗಮನಕ್ಕೂ ಬಾರದೆಯೇ ಬೇರೆ ಕಡೆಗೆ ವರ್ಗಾವಣೆಯನ್ನು ಮಾಡಿಕೊಂಡಿದ್ದಾರೆ. 287.69 ಕೋಟಿ ರೂಪಾಯಿಗಳು, ಇದು ಸಣ್ಣ ಮೊತ್ತವಲ್ಲ, ಅದರಿಂದ ಏನಾಗಿದೆ ಎಂದರೆ ಕಳೆದ ಎರಡು ವರ್ಷದಿಂದ ರಸ್ತೆಗಳ ನಿರ್ವಹಣೆಗೆ ಈ ರಾಜ್ಯದಲ್ಲಿ ಒಂದು ಪೈಸೆಯೂ ಇಲ್ಲ. 3054 ಫಂಡ್‌ನಲ್ಲಿ ಏನು ನಾನ್ ಪ್ಲಾನ್‌ನಲ್ಲಿ ಹಣವನ್ನು ನಿರ್ವಹಣೆಗೆ ಕೊಡುತ್ತಿದ್ದರು ಅದನ್ನೂ ಕೂಡ ಕೊಟ್ಟಿಲ್ಲ. ಒಂದು ಕಡೆ ಭಾರತ ಸರ್ಕಾರವು ಕೊಟ್ಟಂತಹ 287.69 ಕೋಟಿ ರೂಪಾಯಿಗಳು ಬೇರೆ ಕಡೆಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಆದರೆ ಈ ರಾಜ್ಯದಲ್ಲಿರತಕ್ಕಂತಹ ರಸ್ತೆಗಳು ಸರಿಯಿಲ್ಲ.

ಅಧ್ಯಕ್ಷರು : ಮಾನ್ಯ ಕಾರ್‌ಜೋಳ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ರಾಜ್ಯದಲ್ಲಿರುವ ರಸ್ತೆಗಳ ಪರಿಸ್ಥಿತಿ ಏನು? ಅದು ಸರ್ಕಾರವು ಕೊಟ್ಟಂತಹ ಹಣವಾಗಿರುತ್ತದೆ. ಲೋಕೋಪಯೋಗಿ ಕಾರ್ಯದರ್ಶಿಗಳು ಇಲ್ಲಿಯೇ ಇದ್ದಾರೆ. ಅದಕ್ಕಾಗಿ ದಯಮಾಡಿ ಸ್ವಲ್ಪ ಕ್ಲಾರಿಫಿಕೇಷನ್‌ನ್ನು ಕೊಡಿ. ಯಾವ ಕಾರಣಕ್ಕಾಗಿ ಹಣವನ್ನು ಬೇರೆ ಕಡೆಗೆ ವರ್ಗ ಮಾಡಿಕೊಂಡಿದ್ದೀರಿ? ಅದು ರಸ್ತೆಗಳ ನಿರ್ವಹಣೆಗೆ ಕೊಟ್ಟಂತಹ ಹಣವಾಗಿರುತ್ತದೆ. 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೊಟ್ಟಂತಹ ಹಣವಾಗಿರುತ್ತದೆ. ದಯವಿಟ್ಟು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಇಲ್ಲಿ ನನ್ನ ಹತ್ತಿರ ಉತ್ತರವಿಲ್ಲ. ಅವರು ಬೇರೆ ರೂಪದಲ್ಲಿ ಪ್ರಶ್ನೆಯನ್ನು ಕೊಡಲಿ. ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ.

ರೈತರಿಗೆ 24 ಗಂಟೆ ನಿರಂತರ ವಿದ್ಯುತ್ ಸರಬರಾಜು

39 (315): ಶ್ರೀ ಬಸವರಾಜು ಹೆಚ್.ಡಿ (ವಿರಾಜಪೇಟೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಕ್ಕೆ ಪ್ರತಿ ನಿತ್ಯ ಅಗತ್ಯವಿರುವ ವಿದ್ಯುತ್‌ನ ಪ್ರಮಾಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಆ) ಹಾಲಿ ಸರ್ಕಾರ ಉತ್ಪಾದನೆ ಮಾಡುತ್ತಿರುವ ವಿದ್ಯುತ್ ಎಷ್ಟು;

ಇ) ಯಾವ ಯಾವ ಮೂಲಗಳಿಂದ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸಕ್ತ ವರ್ಷವಾದ 2004–05ರಲ್ಲಿ ರಾಜ್ಯದ ದಿನವಹಿ ಸರಾಸರಿ ಅನಿರ್ಭಂದಿತ ವಿದ್ಯುತ್ ಬೇಡಿಕೆಯು 106.7 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಹಾಲಿ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಎರಡು ಸಂಸ್ಥೆಗಳಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತವು ದಿನವಹಿ ಸರಾಸರಿ ಒಟ್ಟು 51.4 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ. ಅಲ್ಲದೇ, ಖಾಸಗಿ ಕ್ಷೇತ್ರದಲ್ಲಿ ರಾಜ್ಯದಲ್ಲಿ ಇರುವ ಸ್ವತಂತ್ರ ವಿದ್ಯುತ್ ಉತ್ಪಾದಕರು ಸಹ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಹಾಲೀ ದಿನವಹಿ ಸರಾಸರಿ 15.7 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ್ನು ಖರೀದಿಸುತ್ತಿದೆ.

ಅಲ್ಲದೇ, ರಾಜ್ಯಕ್ಕೆ ಕೇಂದ್ರದ ಸ್ವಾಮ್ಯದಲ್ಲಿರುವ ವಿದ್ಯುತ್ ಘಟಕಗಳಿಂದ ಸರಾಸರಿ ದಿನವಹಿ 25.4 ದಶಲಕ್ಷ ಯೂನಿಟ್‌ಗಳ ಪಾಲೂ ಸಹ ಲಭ್ಯವಿರುತ್ತದೆ.

ಇ) ಮೂಲವಾರು ವಿವರಗಳು ಕೆಳಕಂಡಂತಿವೆ :

ಕ್ರಮ ಸಂಖ್ಯೆ	ಉತ್ಪಾದನೆಯ ಮೂಲ	ಸರಾಸರಿ ವಿದ್ಯುತ್ ಉತ್ಪಾದನೆಯ ಪ್ರಮಾಣ ದಶಲಕ್ಷ ಯೂನಿಟ್‌ಗಳಲ್ಲಿ